# ಮಹಿಳೆಯರ ಮೇಲೆ ಮಾಧ್ಯಮದ ಪ್ರಭಾವ

**ಶ್ರೀನಿವಾಸ ಬಿ.ಎಸ್.**

ಅತಿಥಿ ಉಪನ್ಯಾಸಕರು, ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು.

**DOI: https://doi.org/10.5281/zenodo.17221740**

## ABSTRACT:

ಇಂದು 21ನೇ ಶತಮಾನವನ್ನು ಮಾಧ್ಯಮ ಯುಗ ಎಂದು ನಾವು ಪರಿಗಣಿಸಿದ್ದೇವೆ. ಸಂವಹನ ತಂತ್ರಜ್ಞಾನದಲ್ಲಿ ನಡೆದಿರುವ ಕ್ರಾಂತಿಕಾರಕ ಬೆಳವಣಿಗೆಯಿಂದ ಇದೊಂದು ಜಗತ್ತಿನ ಕೇಂದ್ರಬಿಂದುವಾಗಿದೆ. ಪ್ರತಿಕ್ಷಣದಲ್ಲೂ ಬದಲಾವಣೆ ಕಾಣುತ್ತಿರುವ ಈ ಕ್ಷೇತ್ರದಲ್ಲಿ ಮಾಧ್ಯಮ ಇಂದು ಜನರ ಒಡನಾಡಿಯಾಗಿದೆ. ತಂತ್ರಜ್ಞಾನ ಮನೆಯ ಬಾಗಿಲಿಗೆ ಲಭ್ಯ; ಮಾಧ್ಯಮ ಮತ್ತು ಕಂಪ್ಯೂಟರ್ ಮನೆಯ ವಿನ್ಯಾಸವನ್ನೇ ಬದಲಾಯಿಸಿವೆ. ವಿಶ್ವದ ಸುದ್ದಿ ವಿಷಯಗಳನ್ನು ಕ್ಷಣ ಮಾತ್ರದಲ್ಲಿ ಮನೆಯಲ್ಲೇ ಪಡೆಯುವ ಸೌಲಭ್ಯದಿಂದ ಜನರ ಸಂಪರ್ಕದ ರೀತಿ ನೀತಿಯೇ ಬದಲಾವಣೆಯಾಗಿದೆ. ಮಾಧ್ಯಮವು ಹಲವಾರು ರೀತಿಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದರ ಮೂಲಕ ಸಮಾಜದಲ್ಲಿನ ಮಹಿಳೆಯರು ಮತ್ತು ಮಕ್ಕಳಿಗೆ ಅರಿವು ಮತ್ತು ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಇಂದು ಮಹಿಳೆ ಮನೆಯ ಹೊರಗೂ ಒಳಗೂ ದುಡಿಯುವ ಅನಿವಾರ್ಯತೆ ಇದೆ. ಆಕೆ ತನ್ನ ವ್ಯಕ್ತಿತ್ವವನ್ನು ಸ್ವತಂತ್ರವಾಗಿ ರೂಪಿಸಿಕೊಳ್ಳಲು ಅನುಕೂಲಗಳಿವೆ ಮತ್ತು ಅವಕಾಶಗಳಿವೆ. ಸಮಾಜ ಈ ಬದಲಾವಣೆಯನ್ನು ಒಪ್ಪಿಕೊಂಡರೆ, ಮಹಿಳೆಯರು ತಮ್ಮ ಪ್ರಗತಿಗೆ ತಾವೇ ಮಾರ್ಗೋಪಾಯವನ್ನು ಮಾಧ್ಯಮದ ಮೂಲಕ ಕಂಡುಕೊಳ್ಳಬಹುದು.

## KEYWORDS:

ಸಾಮಾಜಿಕ ಮಾಧ್ಯಮ, ಸಾಮಾಜಿಕ ಜಾಲತಾಣಗಳು, ಅಂತರ್ಜಾಲ, ಮಹಿಳೆ, ಪರಿಣಾಮ.

**ಪೀಠಿಕೆ:**

ಇಂದಿನ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳನ್ನು ಕಾಣುತ್ತೇವೆ. ಸಮುದಾಯದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಜನ ಜಾಗೃತಿ ಮೂಡಿಸುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸುತ್ತವೆ. "ಪ್ರಜಾಪ್ರಭುತ್ವದ ನಾಲ್ಕನೇ ಸ್ಥಂಭದಂತೆ" ತನ್ನ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿರುವ ಮಾಧ್ಯಮಗಳು, ತನ್ನ ಅನೇಕ ರೀತಿಯ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಮಕ್ಕಳಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಪ್ರೇರಣೆ ಮತ್ತು ಸಮಾಜದ ಜನರಿಗೆ, ಮಹಿಳೆಯರಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ ಪ್ರಜ್ಞೆ ಮೂಡಿಸುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ.

**ಅರ್ಥ:**

ಸಮಾಜದ ವ್ಯವಸ್ಥೆಯಲ್ಲಿ ನಿರ್ಣಯಗಳು, ಆದೇಶಗಳು ಮತ್ತು ಆಚಾರಗಳು ಮುಂತಾದವುಗಳನ್ನು ಜನರಿಗೆ ತಲುಪಿಸುವಂತಹ ಸಾಧನವೇ ಮಾಧ್ಯಮ ಎಂದು ಹೇಳಬಹುದಾಗಿದೆ. ಮಾನವನ ಜೀವನವನ್ನು ಪ್ರಸರಣಗೊಳಿಸಿ ಅವನಿಗೆ ಜ್ಞಾನದ ಬೆಳಕನ್ನು ನೀಡಿ ಮಾನವ ಜೀವಿಯನ್ನು ಸಂಘಜೀವಿಯನ್ನಾಗಿ ಮಾರ್ಪಡಿಸುತ್ತದೆ. ಹಾಗೂ ಅನಕ್ಷರತೆಯಿಂದ ಸಾಕ್ಷರತೆಯ ಕಡೆಗೆ ಮತ್ತು ಜ್ಞಾನದಿಂದ ವಿಜ್ಞಾನದ ಕಡೆಗೆ ಕೊಂಡೊಯ್ಯುವ ಒಂದು ಪರಿಣಾಮಕಾರಿ ಸಾಧನವಾಗಿದೆ.

**ವ್ಯಾಖ್ಯಾನಗಳು:**

1. ಡಾ|| ಯಶ್‌ಪಾಲ್ ಗಿಲ್ಬರ್ಟ್‌ರವರ ಪ್ರಕಾರ: "ಜನರಿಗೆ ಪ್ರಚಲಿತ ವಿದ್ಯಾಮಾನಗಳ ಶೀಘ್ರ ಬೆಳವಣಿಗೆಯ ವೇಗದ ಮಾಹಿತಿಗಳನ್ನು ಒದಗಿಸುವ ಸಾಧನಗಳೇ ಸಮೂಹ ಮಾಧ್ಯಮಗಳಾಗಿವೆ".
2. ಡಾ|| ಚಂದ್ರಶೇಖರವರ ಪ್ರಕಾರ: "ಸಂವಹನ ಮಾಧ್ಯಮಗಳು ಜನರ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಿ ವಿದ್ಯಾರ್ಥಿಗಳಿಗೆ ಹಾರ್ಮೋನಿನಂತೆ ಸಹಾಯವಾಗುವುದು ಎಂದಿದ್ದಾರೆ".

**ಮಾಧ್ಯಮದ ಪ್ರಕಾರಗಳು:**

ಮಾಧ್ಯಮಗಳನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ವಿವರಿಸಲಾಗಿದೆ. ಅವುಗಳೆಂದರೆ:

» **ಮುದ್ರಣ ಮಾಧ್ಯಮ: (Print Media)**

1. ದಿನ ಪತ್ರಿಕೆ

2. ವಾರ ಪತ್ರಿಕೆ
3. ಮಾಸ ಪತ್ರಿಕೆ
4. ತ್ರೈಮಾಸಿಕ ಪತ್ರಿಕೆಗಳು
5. ಅರೆ ವಾರ್ಷಿಕ ವರದಿ
6. ವಾರ್ಷಿಕ ವರದಿ
7. ಸರ್ಕಾರಿ ಗೆಜೆಟ್‌ಗಳು
8. ರಾಷ್ಟ್ರೀಯ ಪತ್ರಿಕೆಗಳು
9. ವಿಶೇಷ ಸಂಚಿಕೆಗಳು
10. ಕಥೆ, ಕಾದಂಬರಿಗಳು, ನಾಟಕಗಳು, ಇನ್ನಿತರ ಸಾಹಿತ್ಯ ಬರಹಗಳು.

## » ವಿದ್ಯುನ್ಮಾನ ಮಾಧ್ಯಮ: (Electronic Media)

1. ಟೆಲಿಗ್ರಾಫ್ (ತಂತಿವಾರ್ತೆ)
2. ಆಕಾಶವಾಣಿ
3. ದೂರದರ್ಶನ
4. ದೂರವಾಣಿ
5. ಕಾಂಪ್ಯಾಕ್ಟ್ ಡಿಸ್ಕ್‌ಗಳು (CD), ಪೆನ್ ಡ್ರೈವ್
6. ಮೊಬೈಲ್‌ಗಳು

## ಮಾಧ್ಯಮಗಳ ಉದ್ದೇಶಗಳು:

1. ಜನರನ್ನು ಪ್ರಜ್ಞಾವಂತರನ್ನಾಗಿ ಮಾಡುವುದು.
2. ಜನರ ನಡುವೆ ಸಂಸ್ಕೃತಿಯನ್ನು ಪರಿಚಯಿಸುವುದು.
3. ರಾಷ್ಟ್ರದ ಐಕ್ಯತೆಯನ್ನು ಎತ್ತಿಹಿಡಿಯುವುದು.
4. ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ಪ್ರೇರಣೆ ನೀಡುವುದು.
5. ಜನರಲ್ಲಿ ಉತ್ತಮ ಮೌಲ್ಯಗಳ ಪೋಷಣೆಗೆ ನೆರವು ನೀಡುವುದು.
6. ಜನರಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಜನಜಾಗೃತಿ ಮೂಡಿಸುವುದು.
7. ಆರೋಗ್ಯ, ನೈತಿಕ ಶಿಕ್ಷಣ, ನೈತಿಕ ಮೌಲ್ಯಗಳ ಬಗ್ಗೆ ಮಾರ್ಗದರ್ಶನ ನೀಡುವುದು.
8. ಪ್ರಚಲಿತ ವಿದ್ಯಾಮಾನಗಳ ಬಗ್ಗೆ ಮಾಹಿತಿ ನೀಡುವುದು.
9. ದೂರಸಂವೇದಿ ಉಪಗ್ರಹಗಳ ಬಗ್ಗೆ ಮಾಹಿತಿ ಒದಗಿಸುವುದು.
10. ಅಂತರರಾಷ್ಟ್ರೀಯ ಮನೋಭಾವನೆ ಬೆಳೆಸುವುದು.
11. ವಿವಿಧ ಮಾಧ್ಯಮಗಳ ಮೂಲಕ ಪ್ರಪಂಚದ ವಿವಿಧ ಭಾಗಗಳಲ್ಲಿ ನಡೆಯುವ ಘಟನಾವಳಿಗಳನ್ನು ಅರಿಯುವುದು.

**ಮಾಧ್ಯಮದ ಕಾರ್ಯಗಳು:**

1. ಪಾಶ್ಚಿಮಾತ್ಯರ ಅಭಿವೃದ್ಧಿಯ ಬಗ್ಗೆ ಮಾಹಿತಿಯನ್ನು ನೀಡುತ್ತದೆ.
2. ವಾಣಿಜ್ಯ ಲೇವಾದೇವಿ ವ್ಯವಹಾರದ ಬಗ್ಗೆ ಮಾಹಿತಿ ನೀಡುತ್ತದೆ.
3. ಕಲೆಸಂಸ್ಕೃತಿ ಪರಂಪರೆಯ ಇತಿಹಾಸವನ್ನು ತಿಳಿಸುತ್ತದೆ.
4. ವಿಜ್ಞಾನತಂತ್ರಜ್ಞಾನದ ನವೀನ ಆವಿಷ್ಕಾರದ ಬಗ್ಗೆ ಮಾಹಿತಿ ನೀಡುತ್ತದೆ.
5. ಸ್ತ್ರೀಸಾಮಾನ್ಯರ ಸಾಮಾಜಿಕ ಜೀವನ ಶೈಲಿಯಲ್ಲಿ ವ್ಯತ್ಯಾಸ ನೋಡಬಹುದು.
6. ಕ್ರೀಡೆವಿಜ್ಞಾನ ಕುರಿತ ಮಾಹಿತಿ ನೀಡುವುದರೊಂದಿಗೆ ಸ್ಫೂರ್ತಿ ನೀಡುತ್ತದೆ.
7. ಸಾರ್ವಜನಿಕರಿಗೆ ಸುಖದಿಂದ ಬಾಳಲು ಸಹಕರಿಸುತ್ತದೆ.
8. ಬಣ್ಣ ಬಣ್ಣಗಳಿಂದ ಚಿತ್ರ ವಿನ್ಯಾಸಗಳ ಮುಖೇನ ಸುದ್ದಿಯನ್ನು ನೀಡುತ್ತದೆ.
9. ಮೂಢನಂಬಿಕೆ, ಮೌಢ್ಯಸಂಪ್ರದಾಯವನ್ನು ತಡೆಹಿಡಿಯುತ್ತದೆ.
10. ರೇಡಿಯೋ, ಸಿನಿಮಾ, ಕಂಪ್ಯೂಟರ್, ಇಂಟರ್‌ನೆಟ್‌ಗಳಿಂದ ಕೃಷಿಕರಲ್ಲಿ ಮಾನಸಿಕವಾಗಿ ಬದಲಾವಣೆ ಆಗುತ್ತದೆ.
11. ವ್ಯಕ್ತಿಯ ಸಾಮಾಜೀಕರಣಕ್ಕೆ ಮಾಧ್ಯಮ ಸಹಾಯಹಸ್ತವನ್ನು ನೀಡುತ್ತದೆ.
12. ರಾಜಕೀಯ ಪ್ರಜ್ಞೆ, ಅಧಿಕಾರ ಕುರಿತು ಮಾಹಿತಿಯನ್ನು ಒದಗಿಸುತ್ತದೆ.
13. ಪ್ರತಿಯೊಬ್ಬರಿಗೂ ಪೌರ ಕರ್ತವ್ಯ, ಹಕ್ಕುಗಳ ಜಾಗೃತಿಯನ್ನು ಮೂಡಿಸುತ್ತದೆ.
14. ಸಂಶೋಧನೆಗೆ ಹೆಚ್ಚಿನ ವಿಷಯ ಒದಗಿಸುವುದರೊಂದಿಗೆ ಉತ್ತೇಜನ ನೀಡುತ್ತದೆ.
15. ಅಂತರರಾಷ್ಟ್ರೀಯ ಮಟ್ಟದಲ್ಲಿ ಉನ್ನತಶಿಕ್ಷಣ ಜರುಗುವಂತೆ ಮಾಧ್ಯಮ ಕಾರ್ಯ ಮಾಡುತ್ತಿದೆ.

**ಮಾಧ್ಯಮದ ಜವಾಬ್ದಾರಿಗಳು:**

**1. ಮಾಹಿತಿ ನೀಡುವುದು:** ಮಾಧ್ಯಮದ ಬಳಕೆಯಿಂದ ಮಾನವ ಸೃಜನಶೀಲನಾಗುತ್ತಾನೆ. ಸಂಘಟನೆ, ಹೋರಾಟ, ವಿಚಾರ ವಿನಿಮಯ, ಹೊಸ ಸಮಾಜದ ಆಶೋತ್ತರಗಳು, ಸುಭದ್ರ, ಬಲಿಷ್ಠ ದೇಶಕ್ಕೆ ಮಾಧ್ಯಮದ ಮಹತ್ವದ ಪಾತ್ರ ವಹಿಸುತ್ತದೆ. ಗ್ರಾಮೀಣ ಪ್ರದೇಶದ ಮಾಹಿತಿಯನ್ನು ರಾಷ್ಟ್ರಅಂತರರಾಷ್ಟ್ರೀಯ ಮಟ್ಟದವರೆಗೂ ತಿಳಿಸುವ ಕೆಲಸವನ್ನು ಮಾಧ್ಯಮವು ಮಾಡುತ್ತಾ ಹೋಗುತ್ತದೆ.

**2. ಮನರಂಜನೆ ಒದಗಿಸುವುದು:** ಮನರಂಜನೆಯಿಂದ ನರದೌರ್ಬಲ್ಯತೆಯನ್ನು ತಡೆಯಬಹುದು. ಶಾಂತಿ, ನೆಮ್ಮದಿ, ತೃಪ್ತಿಯ ಬದುಕಿಗೆ ಮನರಂಜನೆಯು ಇಂದಿನ ಕಾಲದಲ್ಲಿ ಆಮ್ಲಜನಕದಂತೆ ಎಂದು ಹೇಳಬಹುದು.

ಮಾಧ್ಯಮ ಎಂಬುದು ಒಂದು ವ್ಯಕ್ತಿಯ ಜೊತೆ ಸಂಪರ್ಕವನ್ನು ಬೆಳೆಸುವುದು ಹಾಗೂ ವ್ಯಕ್ತಿಯಿಂದ ವ್ಯಕ್ತಿಗೆ, ಗುಂಪಿನಿಂದ ಗುಂಪಿಗೆ ಸಂಪರ್ಕವನ್ನು ಕಲ್ಪಿಸಿಕೊಡುವುದು. ಮಾಧ್ಯಮ ಎಂಬುದು ಒಂದು ನಿಂತ ನೀರಲ್ಲ ಅದು ಹರಿಯುವ

ಹೊಳೆ ಇದ್ದಂತೆ. ಒಬ್ಬ ವ್ಯಕ್ತಿಯಿಂದ ವ್ಯಕ್ತಿಗೆ ವಿಷಯವನ್ನು ಹಂಚಿಕೊಳ್ಳುವಂತಹದು. ಭಾಷೆಯನ್ನೇ ಕೇಂದ್ರೀಕರಿಸಿ ಮಾಧ್ಯಮ ಹುಟ್ಟಿಕೊಂಡಿತು. ಸಾಂಸ್ಕೃತಿಕ ವಿಚಾರಗಳನ್ನು ತಿಳಿಸುತ್ತಾ ಹೋಗುತ್ತದೆ. ಸಾಮಾಜಿಕ, ಕೌಟುಂಬಿಕ ಸಮಸ್ಯೆಗಳಿಗೆ ಜೀವ ತುಂಬುತ್ತಾ ಅದಕ್ಕೆ ಒಂದು ಅರ್ಥವನ್ನು ಕಟ್ಟಿಕೊಡುತ್ತದೆ. ಅಕ್ಷರ, ದೃಶ್ಯ, ಶಬ್ದಗಳ ಮೂಲಕ ಮಾಧ್ಯಮವು ಪಾತ್ರ ವಹಿಸುತ್ತದೆ. ಸಮಾಜವನ್ನು ಕಟ್ಟುವಂತಹ ಕೆಲಸವನ್ನು ಮಾಡುತ್ತಾ ಹೋಗುತ್ತದೆ. ಮಾಧ್ಯಮದಲ್ಲಿ ಬಳಸುವಂತಹ ಭಾಷೆ ಸ್ಪಷ್ಟವಾಗಿರಬೇಕು, ಆಗ ಮಾಧ್ಯಮದಲ್ಲಿ ತೋರಿಸುವುದನ್ನು ಜನರು ಮನದಟ್ಟು ಮಾಡಿಕೊಳ್ಳುತ್ತಾರೆ. ಜನರು ಸಬಲೀಕರಣ ಹೊಂದಲು ಸಾಧ್ಯವಾಗುತ್ತದೆ. ಜನರನ್ನು ಎಚ್ಚೆತ್ತುಕೊಳ್ಳುವಂತೆ ಮಾಡಲು ಸಹಾಯವಾಗುತ್ತದೆ. ವಿಕೃತ ಮನಸ್ಸಿಗೆ ದಾರಿಯನ್ನು ಮಾಡಿಕೊಡುತ್ತದೆ. ಸಂದೇಶ ಮತ್ತು ತಿಳುವಳಿಕೆ ನೀಡುವುದು. ಜನರಿಗೆ ದಿಕ್ಕು ತಪ್ಪಿಸುವಂತಹದನ್ನು ಕೂಡ ನಾವು ಕಾಣಬಹುದಾಗಿದೆ. ದೃಶ್ಯ ಮತ್ತು ಶ್ರಾವ್ಯ ಮಾಧ್ಯಮವಾಗಿ ಕೆಲಸ ಮಾಡುತ್ತದೆ. ಅನೇಕ ವಿಚಾರಗಳನ್ನು ತಕ್ಷಣದಲ್ಲಿ ತೋರಿಸಿಕೊಡುತ್ತದೆ. ನಮ್ಮ ಸಮಯವನ್ನು ಮತ್ತು ಉತ್ಸಾಹವನ್ನು ಹಾಳು ಮಾಡುತ್ತದೆ. ಐತಿಹಾಸಿಕವಾಗಿ, ಮೌಲ್ಯಯುತ, ಭಾವನಾತ್ಮಕ, ಸಾಂಸ್ಕೃತಿಕವಾಗಿ ಬಿಂಬಿಸುವಂತಹ ಕಾರ್ಯಕ್ರಮಗಳನ್ನೇ ಹೆಚ್ಚಿನದಾಗಿ ಕಾಣಬಹುದು. ಜಾಗತಿಕ ಮಟ್ಟದಿಂದ ಹಿಡಿದು ಗ್ರಾಮೀಣ ಮಟ್ಟದವರೆಗೂ ಇರುವ ವಿಚಾರವನ್ನು ತಿಳಿಸಿಕೊಡುತ್ತದೆ. ಸಮಾಜಮುಖಿಯಾಗಿ ಅಥವಾ ಸಮಾಜವನ್ನು ಕಟ್ಟುವ ಕೆಲಸವನ್ನು ಮಾಡುತ್ತದೆ.

**ಮಹಿಳೆ ಮತ್ತು ಮಾಧ್ಯಮ:**

ಮಹಿಳೆ ಇರದ ಕ್ಷೇತ್ರವೇ ವಿರಳವಾಗಿರುವ ಈ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿ ದೂರದರ್ಶನ ವೃತ್ತಿಗೆ ಮಹಿಳೆಯರ ಪ್ರವೇಶ ಹೊಸದೇನಲ್ಲ. ಕಳೆದ ಒಂದು ಶತಮಾನದಿಂದಲೂ ಮಹಿಳೆಯರು ದೂರದರ್ಶನದಲ್ಲಿ ದುಡಿಯುತ್ತಿದ್ದಾರೆ ಎಂದರೆ ಆಶ್ಚರ್ಯವಾಗಬಹುದು. ಅದೂ ಭಾರತದಲ್ಲಿ ಈ ಚರಿತ್ರಾರ್ಹ ಘಟನೆ ನಡೆದಿದೆ ಎಂದರೆ ಅದರ ಬಗ್ಗೆ ಕುತೂಹಲ ಹೆಚ್ಚಾಗುವುದರಲ್ಲಿ ಸಂಶಯವೇ ಇಲ್ಲ.

ಮಹಿಳೆಯರ ಒಡನಾಟ ಕೇವಲ ಅಡಿಗೆ ಮನೆಗೆ ಮಾತ್ರ ಸೀಮಿತವಾಗಿದ್ದ ಕಾಲದಲ್ಲೇ, ಅಂದರೆ 19ನೇ ಶತಮಾನದ ಆದಿಯಲ್ಲೇ ಭಾರತದಲ್ಲಿ ಮಾಧ್ಯಮಕ್ಕೆ ಮಹಿಳೆಯರು ಕಾಲಿಟ್ಟಿದ್ದು ಮಹಿಳಾ ಸಬಲೀಕರಣದ ಮೊದಲ ಹೆಜ್ಜೆ ಎಂದು ಹೇಳಿದರೂ ಉತ್ಪ್ರೇಕ್ಷೆಯಲ್ಲ. ಅಂದಿನಿಂದ ಇಂದಿನವರೆಗೂ ಮಹಿಳೆಯರು ಅನೇಕ ಏರುಪೇರುಗಳ ನಡುವೆಯೂ ದೂರದರ್ಶನದಲ್ಲಿನ ವೃತ್ತಿಗೆ ತಮ್ಮದೇ ಆದ ಅಮೂಲ್ಯ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ.

ದೂರದರ್ಶನದ ಜಾಹೀರಾತುಗಳಲ್ಲಿ, ಧಾರವಾಹಿಗಳಲ್ಲಿ, ಚಲನಚಿತ್ರಗಳಲ್ಲಿ ಹೆಣ್ಣು ಮಕ್ಕಳನ್ನು ಹೆಚ್ಚಿನದಾಗಿ ಬಳಸಿಕೊಳ್ಳಲಾಗುತ್ತದೆ. ಮಹಿಳೆ ದೂರದರ್ಶನದಲ್ಲಿ ನಟಿಸಲು ಭಾಷೆ, ವಿದ್ವತ್ತು ಮತ್ತು ಸೌಂದರ್ಯ ಜ್ಞಾನವನ್ನು ಹೊಂದಿರಲೇ ಬೇಕಾಗುತ್ತದೆ. ಮಾಧ್ಯಮಗಳಲ್ಲಿ ದುಡಿಯುವಂತಹ ಮಹಿಳೆಯರು ಹೆಚ್ಚಿನದಾಗಿ ಮೇಲ್ವರ್ಗದವರಿಂದ ಅಥವಾ ಬ್ರಾಹ್ಮಣ ವರ್ಗದವರಿಂದ ಬಂದವರಾಗಿರುತ್ತಾರೆ. ದೂರದರ್ಶನ ಮಹಿಳೆಯರನ್ನು ಸರಿದಾರಿಗೆ ತರುವ ಅಥವಾ ತಪ್ಪು ದಾರಿಗೆ ಸೆಳೆಯುವಂತಹದನ್ನು ಕಾಣಬಹುದಾಗಿದೆ. ಮಹಿಳೆಯನ್ನು ದಿಕ್ಕು ತಪ್ಪಿಸುವಂತಹ ಕಾರ್ಯವನ್ನು ಮಾಡುತ್ತದೆ. ಹೆಣ್ಣಿನ ಸೌಂದರ್ಯ ಮತ್ತು ಬುದ್ಧಿಕೌಶಲ್ಯಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಾರೆ. ಹೆಣ್ಣಿನ ಬದುಕಿನ ಶೈಲಿ, ಊಟೋಪಚಾರಗಳ ಶೈಲಿಯಲ್ಲಿ ಬದಲಾವಣೆಯಾಗುವಂತಹದನ್ನು ದೂರದರ್ಶನದಲ್ಲಿ ಕಾಣಬಹುದಾಗಿದೆ. ಸಾಮಾನ್ಯ ಮತ್ತು ಮಾಧ್ಯಮ ವರ್ಗದ ಮಹಿಳೆಯರನ್ನು ಸೆಳೆಯುವಲ್ಲಿ ಸಹ ಪಾತ್ರವಹಿಸುತ್ತದೆ. ಕೌಟುಂಬಿಕ, ಮಾನಸಿಕ ಮತ್ತು ಜ್ಯೋತಿಷ್ಯ ಶಾಸ್ತ್ರಗಳ ನಂಬಿಕೆಗಳಿಗೆ ಮಹಿಳೆಯರು ದಾಸರಾಗುವಂತಹ ಸನ್ನಿವೇಶವನ್ನು ಕಾಣಬಹುದಾಗಿದೆ. ಮಹಿಳೆಗೆ ಒಂದು ಆಕರ್ಷಣೀಯವಾದ ಸ್ಥಾನವನ್ನು ನೀಡುತ್ತಾ ಹೋಗುತ್ತದೆ. ದೂರದರ್ಶನದಲ್ಲಿ ಕೆಲಸ ನಿರ್ವಹಿಸುವಂತಹ ಮಹಿಳೆಯರು ಸಮಯವನ್ನು ಮೀರಿ ಕೆಲಸ ಮಾಡಬೇಕಾಗುತ್ತದೆ. ದೂರದರ್ಶನದಲ್ಲಿ ಮಹಿಳೆಯ ಸೌಂದರ್ಯಕ್ಕೆ, ಶೀಲಕ್ಕೆ, ಮನಸ್ಸಿಗೆ ಧಕ್ಕೆಯಾಗುವಂತಹ ಸಂದರ್ಭಗಳು ಹೆಚ್ಚಿನದಾಗಿ ಇರುತ್ತವೆ. ಎಚ್ಚರಿಕೆಯ ಮಾನದಂಡಗಳನ್ನು ತಿಳಿಸುತ್ತಾ ಹೋಗುತ್ತದೆ. ಮಹಿಳೆಯರ ಬದುಕಿನ ಭಾಗವಾಗಿ ಕಾಡುತ್ತಾ ಹೋಗುತ್ತದೆ.

**ಮಾಧ್ಯಮದಲ್ಲಿ ಮಹಿಳೆಯರ ಪಾತ್ರಗಳು:**

ಚಲನಚಿತ್ರಗಳಲ್ಲಿ, ದೂರದರ್ಶನ ಕಾರ್ಯಕ್ರಮಗಳಲ್ಲಿ ಮಹಿಳೆ ಪುರುಷನಿಗಿಂತ ಕೀಳು ಎನ್ನುವ ಪ್ರತಿಪಾದನೆ ನೋಡಬಹುದಾಗಿದೆ. ಅಸಹಾಯಕತೆಯಿಂದ, ಹೇಡಿತನದಿಂದ ಇರುವ ಸ್ತ್ರೀ ಪಾತ್ರಗಳನ್ನು ನೋಡಬಹುದು. ಕಥೆಗಳಲ್ಲಿ, ಸಂಭಾಷಣೆಗಳಲ್ಲಿ, ಪಾತ್ರಗಳಲ್ಲಿ ಮತ್ತು ಚಲನಚಿತ್ರಗಳಲ್ಲಿ ಮಹಿಳೆಯರನ್ನು ಸಮಾಜದ ಎರಡನೆಯ ದರ್ಜೆಯ ಪ್ರಜೆ ಎಂದು ಪ್ರತಿಪಾದಿಸಿದೆ. ಮಹಿಳೆಗೂ ಆತ್ಮಾಭಿಮಾನ, ಸ್ವಾಭಿಮಾನ, ಸಮಾಜದಲ್ಲಿ, ಕುಟುಂಬದಲ್ಲಿ ಧ್ವನಿ ಎತ್ತುವ, ತಲೆ ಎತ್ತಿ ನಿಲ್ಲುವ ಹಕ್ಕಿದೆ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಇತರರಿಗಾಗಿಯೇ ತನ್ನನ್ನು ತಾನೇ ಬಲಿಕೊಟ್ಟು ಬದುಕುವ ಹೆಣ್ಣನ್ನು, ಅನಗತ್ಯ ಮೌಲ್ಯಗಳು, ಅಂಧಶ್ರದ್ಧೆ, ಕುರುಡು ಸಂಪ್ರದಾಯಗಳನ್ನು ಚಿತ್ರಗಳಲ್ಲಿ ತೋರಿಸುತ್ತಾರೆ. ಮಹಿಳೆಯರ ಸಾಮಾಜಿಕ, ವಿದ್ಯಾಭ್ಯಾಸ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕೆ ಒತ್ತು ಕೊಟ್ಟು ಅವರಲ್ಲಿ ಜಾಗೃತಿ ಮೂಡಿಸುವಂತಹ ಚಿತ್ರಗಳು ತಯಾರಾಗಬೇಕು. ವಿವಾಹವೊಂದೇ ಮಹಿಳೆಯ

ಗುರಿಯಾಗಬೇಕಿಲ್ಲ, ಅವಳು ಬೇಕೆಂದಾಗ ಸಂಸಾರ ಬಂಧನದಿಂದ ಹೊರಗೆ ಬಂದು ಸ್ವತಂತ್ರವಾಗಿ ಬದುಕಬಹುದು, ಮರುಮದುವೆಯಾಗಬಹುದು. ಮದುವೆ ಮತ್ತು ಸಂಸಾರದ ಜವಾಬ್ದಾರಿಗಳು ಯಾವ ರೀತಿಯಲ್ಲಿ ಅವಳ ವೃತ್ತಿ, ಕಲಾರಾಧನೆ, ಗುರಿಗೆ ಅಡ್ಡಿಯಾಗಬಹುದು ಇತ್ಯಾದಿ ವಿಚಾರಗಳನ್ನು ಚಲನಚಿತ್ರಗಳು ಎತ್ತಿ ಹಿಡಿಯಬೇಕು. ದೂರದರ್ಶನದ ಕಾರ್ಯಕ್ರಮಗಳಲ್ಲಿ ಮಹಿಳೆಯರ ಸುಧಾರಣೆಯ ಬಗ್ಗೆ ಗಮನ ಹರಿಸಬೇಕು. ಸಮಾಜ ಸೇವಕರು, ವಿದ್ಯಾವಂತ, ವಿಚಾರವಂತ ಮಹಿಳೆಯರು, ಲೇಖಕರು ಮತ್ತು ಸಮಾಜದ ಪ್ರತಿಷ್ಠಿತರನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿ, ಅದರ ಮಾರ್ಗದರ್ಶನದಲ್ಲಿ ದೂರದರ್ಶನ ಕಾರ್ಯಕ್ರಮಗಳನ್ನು ಯೋಚಿಸಿ ಪ್ರಸಾರ ಮಾಡುವುದು.

**ಪ್ರಶ್ನೆ ಮಾಡುವುದು:**

ಹೆಚ್ಚು ಶೋಷಣೆಗೆ ಒಳಗಾದ ಮಹಿಳೆಯರನ್ನು ತೋರಿಸಲಾಗುತ್ತಿದೆ ದೂರದರ್ಶನದಲ್ಲಿ ಇಂದು. ಮಾಧ್ಯಮ ಇಂದು ಸಮಾಜದ ಕೇಂದ್ರ ಬಿಂದು. ಇಂತಹ ಪರಿಣಾಮಕಾರಿ ದೂರದರ್ಶನಗಳಲ್ಲಿ ಮಹಿಳೆಗೆ ದೊರೆತಿರುವ ಸ್ಥಾನ ಎಂತಹುದು? ಆಕೆಯನ್ನು ಯಾವ ರೀತಿ ಚಿತ್ರಿಸಿದ್ದಾರೆ ಎಂದು ವಿಶ್ಲೇಷಣೆ ಮಾಡುವ ಸಮಯ ಬಂದಿದೆ. ಅಲ್ಲದೆ ದೂರದರ್ಶನದಲ್ಲಿ ಕೆಲಸ ಮಾಡುವ ವೃತ್ತಿಪರ ಮಹಿಳೆಯರ ಸ್ಥಿತಿಗತಿ ಹಾಗೂ ಸ್ಥಾನಮಾನ ಎಂತಹುದು ಎಂದು ದೂರದರ್ಶನದ ಆಗುಹೋಗುಗಳನ್ನು ಭೂತಗನ್ನಡಿಯಿಂದ ಪರೀಕ್ಷಿಸುವುದು ಇಂದು ಅನಿವಾರ್ಯವಾಗಿದೆ.

ಮಾಧ್ಯಮದಿಂದ ಮಹಿಳಾ ವೀಕ್ಷಕಿಯರು ಹೇಗೆ ಸಮಯ ಕಳೆಯುತ್ತಿದ್ದಾರೆ ಹಾಗೂ ಸಮಯ ಹೇಗೆ ದುರುಪಯೋಗವಾಗುತ್ತಿದೆ ಎನ್ನುವುದನ್ನು ನಾವು ನೋಡುವುದಾದರೆ: ಮಾಧ್ಯಮದ ಬಗ್ಗೆ ಮಹಿಳೆಯರಲ್ಲಿ ಇಂದು ಒಳ್ಳೆಯ ಅಭಿಪ್ರಾಯ ಕಡಿಮೆಯಾಗುತ್ತಿದೆ. ಏಕೆಂದರೆ ಬಹಳಷ್ಟು ಮಹಿಳೆಯರು ಟಿ.ವಿ. ವೀಕ್ಷಣೆಯಲ್ಲೇ ತಮ್ಮ ವೇಳೆ ಕಳೆಯುತ್ತಿದ್ದಾರೆ ಎನ್ನುವ ಆಪಾದನೆ ಇದೆ. ಇದು ಸತ್ಯವೂ ಹೌದು. ಇಂದು ಗೃಹಿಣಿಯರು ದಿನದ ಹೆಚ್ಚು ಕಾಲ ಟಿ.ವಿ. ಧಾರವಾಹಿಗಳನ್ನು ನೋಡುವುದರಲ್ಲಿ ಮತ್ತು ಟಿ.ವಿ.ಯಲ್ಲಿ ಪ್ರಸಾರವಾಗುವ ಕೇಬಲ್ ಸಿನಿಮಾಗಳ ವೀಕ್ಷಣೆಯಲ್ಲೇ ಕಳೆಯುತ್ತಿದ್ದಾರೆ ಎಂಬ ದೂರಿದೆ. ಟಿ.ವಿ. ಧಾರವಾಹಿಗಳಿಂದ ಮಹಿಳೆಯರು ಮನೆಯನ್ನು ಮತ್ತು ಕುಟುಂಬವನ್ನು ನಿರ್ಲಕ್ಷಿಸುತ್ತಿದ್ದಾರೆ ಎನ್ನುವ ಟೀಕೆ ಕೂಡ ಇದೆ.

ಹೆಚ್ಚಾಗಿ ಮಹಿಳೆಯರು ಸುದ್ದಿ ಅಥವಾ ಕ್ರೀಡೆಯಂತಹ ಕಾರ್ಯಕ್ರಮಗಳಲ್ಲಿ ಆಸಕ್ತಿ ತೋರುವುದಿಲ್ಲ ಎಂಬ ಧೋರಣೆ ಇದೆ. ಸಿನಿಮಾ ಆಧಾರಿತ ಕಾರ್ಯಕ್ರಮಗಳಲ್ಲಿಯೇ ಮಹಿಳೆಯರು ಹೆಚ್ಚು ಒಲವನ್ನು ತೋರುತ್ತಾರೆ. ತಮ್ಮ

ಜ್ಞಾನದ ವಿಸ್ತಾರವನ್ನು ಹೆಚ್ಚು ಮಾಡುವಂತಹ ಕಾರ್ಯಕ್ರಮಗಳನ್ನು ಅವರು ವೀಕ್ಷಿಸುವುದಿಲ್ಲ. ಮಹಿಳೆಯರಿಗೆ ಮನರಂಜನೆಯೇ ಮುಖ್ಯ. ಇದರಿಂದಾಗಿ ಟಿ.ವಿ. ಕಾರ್ಯಕ್ರಮಗಳು ಮಹಿಳಾ ವೀಕ್ಷಕರನ್ನೇ ಗುರಿಯನ್ನಾಗಿಟ್ಟುಕೊಂಡು ತಯಾರಾಗುತ್ತಿವೆ. ವೀಕ್ಷಕರು ಹೆಚ್ಚಾದಷ್ಟು ಜಾಹೀರಾತಿನ ಬೆಂಬಲ ಕೂಡ ದೊರೆಯುವುದರಿಂದ ಟಿ.ವಿ. ಚಾನಲ್‌ಗಳು ಮತ್ತು ಅದರ ನಿರ್ಮಾಪಕರು ಲಾಭ ಗಳಿಸುತ್ತಿದ್ದಾರೆ. ಆರ್ಥಿಕವಾಗಿ ಮಹಿಳೆಯರಿಂದಾಗಿಯೇ ಟಿ.ವಿ. ಕಾರ್ಯಕ್ರಮದ ನಿರ್ಮಾಪಕರಿಗೆ ಅಪಾರ ಲಾಭವಿದೆ. ಏಕೆಂದರೆ ಟಿ.ವಿ. ಧಾರವಾಹಿಯನ್ನು ವೀಕ್ಷಿಸುವ ಮಹಿಳೆಯರು ಪ್ರತಿದಿನ ಕಥೆಯ ಬೆಳವಣಿಗೆಯನ್ನು ಕುತೂಹಲದಿಂದ ನೋಡಲು ಕಾತುರರಾಗಿರುತ್ತಾರೆ.

ಇಂದಿನ ನಮ್ಮ ಸಮಾಜದಲ್ಲಿ ಜನರು ಬದಲಾಗಿದ್ದಾರೆ. ಅವರ ಮನೋಧರ್ಮ ಬದಲಾಗಿದೆ. ವಿಧವಾ ವಿವಾಹ ಅದರಲ್ಲೂ ಮಹಿಳೆಯರು ಸಣ್ಣ ವಯಸ್ಸಿನವರಾಗಿದ್ದರೆ ಅದನ್ನು ಸಮಾಜ ಒಪ್ಪಿಕೊಂಡಿದೆ. ಜನರೂ ಕೂಡ ಪ್ರಗತಿಪರರಾಗಿದ್ದಾರೆ. ಇಂತಹ ಹತ್ತು ಹಲವಾರು ಘಟನೆಗಳು ನಮ್ಮ ಕಣ್ಣು ಮುಂದೆ ನಡೆಯುತ್ತಿರುವಾಗ, ಧಾರವಾಹಿ ನಿರ್ಮಾಪಕರು ಇದಾವುದನ್ನೂ ಕಾಣದ ಕುರುಡರಂತೆ ವರ್ತಿಸುತ್ತಿರುವುದು ದುರದೃಷ್ಟಕರ. ಇಂತಹ ಬದಲಾವಣೆಗಳು ಸಮಾಜದಲ್ಲಿ ನಡೆದಿದ್ದರೂ, ಹಳೆಯ ಮೌಲ್ಯದ ಜಾಡನ್ನೇ ಇಂದಿಗೂ ಟಿ.ವಿ. ಧಾರವಾಹಿಯ ನಿರ್ಮಾಪಕರು ತಿಳಿಯದಿರುವುದು ಖಂಡನೀಯ. ಇದು ಮಹಿಳೆಯರ ಶೋಷಣೆಯ ಇನ್ನೊಂದು ಮುಖ. ಮಹಿಳೆಯರ ಮನೋಭಾವವನ್ನೇ ಎಲ್ಲಿ ಬದಲಾಯಿಸಬಹುದೋ ಅಲ್ಲಿ ಧಾರವಾಹಿಗಳು ಅಡೆತಡೆ ತರುತ್ತಿವೆ. ಮಹಿಳೆಯರನ್ನು ಪುನಃ ಅಡಿಗೆ ಮನೆಗೆ ಸೀಮಿತಗೊಳಿಸುವ ಪ್ರಯತ್ನ ಮಾಡಿದೆ. ತುಕ್ಕು ಹಿಡಿದ ಮೌಲ್ಯವನ್ನು ಪುನಃ ಚಲಾವಣೆಗೆ ತರುವ ಈ ಪ್ರವೃತ್ತಿ ಮಹಿಳಾ ಸಬಲೀಕರಣದ ಹೋರಾಟಕ್ಕೆ ಮಾರಕವಾಗಲಿದೆ.

**ಉಪಸಂಹಾರ:**

ಮಾಧ್ಯಮ ಎಂಬ ತಂತ್ರಜ್ಞಾನದಿಂದ ಲಿಂಗಾಧಾರಿತ ಹಿಂಸೆಗಳ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಬೆಳಕಿಗೆ ಬರುತ್ತಿವೆ. ಹೆಣ್ಣು ಮಕ್ಕಳು/ಮಹಿಳೆಯರ ಸುರಕ್ಷತೆ ಮತ್ತು ಯೋಗಕ್ಷೇಮಕ್ಕೆ ಅನೇಕ ರೀತಿಯ ಗಂಭೀರ ಅಡೆತಡೆಗಳು, ಬೆದರಿಕೆಗಳು ಕಾರಣವಾಗುತ್ತಿವೆ. ಆನ್‌ಲೈನ್ ನಿಂದನೆಯಿಂದ ಹೆಣ್ಣು ಮಕ್ಕಳು/ಮಹಿಳೆಯರು ತಮ್ಮ ಕುಟುಂಬಗಳಲ್ಲಿ ಹಾಗೂ ತಾವು ಕೆಲಸ ಮಾಡುವಂತಹ ಸ್ಥಳಗಳಲ್ಲಿ ಸುರಕ್ಷಿತವಾಗಿರುವುದಕ್ಕೆ ಸಾಧ್ಯವಾಗದ ರೀತಿಯಲ್ಲಿ ಉಸಿರುಗಟ್ಟಿಸುವಂತಹ ವಾತಾವರಣವನ್ನು ಈ ಮಾಧ್ಯಮಗಳು ಸೃಷ್ಟಿ ಮಾಡುತ್ತಿವೆ.

## ಪರಾಮರ್ಶನ ಗ್ರಂಥಗಳು:

1. ಕಲಾವತಿ ಬಿ.ಜಿ., (2010) ಮಾಧ್ಯಮ ಮತ್ತು ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಉಷಾರಾಣಿ ಎನ್., (2002), ಮಾಧ್ಯಮ ಮತ್ತು ಮಹಿಳೆ, ರಾಧಾ ಟ್ರಸ್ಟ್, ಮಂಡ್ಯ.
3. ಗೀತಾ ತಿವಾರಿ, (2010) ಮಾಧ್ಯಮ ಮತ್ತು ಮಹಿಳೆ, ಮಹಾವೀರ ಅಂಡ್ ಸನ್ಸ್ ಪ್ರಕಾಶನ, ಬೆಂಗಳೂರು.
4. ನೇಮಿಚಂದ್ರ, (2001), ಮಹಿಳಾ ಅಧ್ಯಯನ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
5. ಮಣಿಕರ್ಣಿಕಾ ಎಚ್.ಆರ್., (2013), ಮಹಿಳೆಯರ ಹದಿಹರೆಯದ ಸಮಸ್ಯೆಗಳು, ಸವಾಲುಗಳು ಮತ್ತು ಪರಿಹಾರ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
6. ಶಂಕರ್‌ರಾವ್ ಚ.ನ., (2012), ಮಹಿಳಾ ಅಧ್ಯಯನ, ಜೈ ಭಾರತ್ ಪ್ರಕಾಶನ, ಮಂಗಳೂರು.
7. ಶ್ರೀಮತಿ ಎಚ್.ಎಸ್., (2001), ಆಧುನಿಕ ಭಾರತದಲ್ಲಿ ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ಸುಧಾ ಸೀತಾರಾಮನ್, (2010), ಮಹಿಳಾ ಅಧ್ಯಯನ ಸಮಾಜ ಶಾಸ್ತ್ರೀಯ ದೃಷ್ಟಿಕೋನ, ಸ್ತ್ರೀಲೇಖ ಪ್ರಕಾಶನ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.